

ತಾವೇ ವಿನ್ಯಾಸಗೊಳಿಸಿದ ಉಡುಪುಗಳೊಂದಿಗೆ ಶ್ರುತಿ ನಾಯಕ್

# ಪಾಶ್ಚಾತ್ಯ ಉಡುಪಿಗೆ ದೇಸೀ ಸ್ಪರ್ಶ

**ಹುಬ್ಬಳ್ಳಿಯಲ್ಲಿರುವ ವಸ್ತ್ರವಿನ್ಯಾಸಕಿ ಶ್ರುತಿ ನಾಯಕ್ ಲಂಡನ್‌ನಲ್ಲಿ ಈಚೆಗೆ ನಡೆದ ಫ್ಯಾಷನ್ ಸಪ್ತಾಹದಲ್ಲಿ ಭಾಗವಹಿಸಿ ಬಂದಿದ್ದಾರೆ. ಸಾವಿರಾರು ವಿನ್ಯಾಸಕರು ಈ ಸಪ್ತಾಹದಲ್ಲಿ ಅವಕಾಶಕ್ಕಾಗಿ ಹಾತೊರೆದಿದ್ದು ವಿಶ್ವದ ಒಟ್ಟು 24 ವಸ್ತ್ರವಿನ್ಯಾಸಕರಿಗೆ ಮಾತ್ರ ಅವಕಾಶ ಸಿಕ್ಕಿತ್ತು. ಇಂದಿನ ಫ್ಯಾಷನ್ ಟ್ರೆಂಡ್, ಉಡುಪು ವಿನ್ಯಾಸ, ಗ್ರಾಹಕರ ಅಭಿಪ್ರಾಯ.. ಮುಂತಾದ ವಿಷಯಗಳ ಬಗ್ಗೆ ಶ್ರುತಿ 'ಸುಧಾ'ದೊಂದಿಗೆ ಅನಿಸಿಕೆ ಹಂಚಿಕೊಂಡಿದ್ದಾರೆ.**

■ ಗುರು ಪಿ.ಎಸ್.

ಚಿತ್ರಗಳು: ತಾಜುದ್ದೀನ್ ಆಜಾದ್

ಉಡುಪು ಮೈಗೆ ಒಪ್ಪುವಂತಿರಬೇಕು, ಆಕರ್ಷಕವಾಗಿರಬೇಕು ಎನ್ನುವುದು ಸಾಮಾನ್ಯ. ಅದೇ ಉಡುಪು ನಮ್ಮ ಸಂಸ್ಕೃತಿ ಬಿಂಬಿಸುವುದರ ಜೊತೆಗೆ, ಈಗಿನ ಕಾಲಮಾನಕ್ಕೂ ಅನ್ವಯವಾಗುವಂತಿರಬೇಕು ಎನ್ನುವುದು ಫ್ಯಾಷನ್ ಲೋಕದ ಮಾತು. ನಿತ್ಯ ಹೊಸದನ್ನು ಬಯಸುವ ಫ್ಯಾಷನ್ ಜಗತ್ತಿನ ಸವಾಲನ್ನು ಅಷ್ಟೇ ಪ್ರೀತಿಯಿಂದ ಸ್ವೀಕರಿಸಿ ಮುನ್ನಡೆಯುತ್ತಿದ್ದಾರೆ ಹುಬ್ಬಳ್ಳಿಯ ಶ್ರುತಿ ನಾಯಕ್.

ಹುಬ್ಬಳ್ಳಿಯಲ್ಲಿರುವ ಅಂತರರಾಷ್ಟ್ರೀಯ ಫ್ಯಾಷನ್ ಡಿಸೈನಿಂಗ್ (ಐಎನ್‌ಐಎಫ್‌ಡಿ) ಸಂಸ್ಥೆಯ ವಿದ್ಯಾರ್ಥಿನಿಯಾಗಿರುವ ಶ್ರುತಿ ನಾಯಕ್, ವಿನ್ಯಾಸಗೊಳಿಸಿರುವ ಉಡುಪುಗಳು ಲಂಡನ್‌ನ ಫ್ಯಾಷನ್ ಸಪ್ತಾಹದಲ್ಲಿ ಪ್ರದರ್ಶನಗೊಂಡಿವೆ. ಅರ್ಜಿ ಸಲ್ಲಿಸಿದ್ದ ಸಾವಿರ ಅಭ್ಯರ್ಥಿಗಳ ಪೈಕಿ, ಈ ಕಾರ್ಯಕ್ರಮದಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಲು ಅವಕಾಶ ಸಿಕ್ಕಿದ್ದು 24 ಜನರಿಗೆ ಮಾತ್ರ. ಅದರಲ್ಲಿ ಶ್ರುತಿಯವರೂ ಒಬ್ಬರು. ವಸ್ತ್ರವಿನ್ಯಾಸ ಲೋಕದ ದಿಗ್ಗಜರು, ಇವರ ಸೃಜನಶೀಲತೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇವರು ವಿನ್ಯಾಸಗೊಳಿಸಿದ ಡ್ರೆಸ್‌ಗಳ ಕುರಿತು ಇಂಗ್ಲೆಂಡ್‌ನ ಪ್ರತಿಷ್ಠಿತ ಫ್ಯಾಷನ್ ಡಿಸೈನ್ ಮಾಸಪತ್ರಿಕೆ ವೋಗ್ (vogue) ನಲ್ಲಿ ವರದಿ ಪ್ರಕಟವಾಗಿದೆ.

ಈ ಕ್ಷೇತ್ರದಲ್ಲಿ ಇರುವ ಅವಕಾಶ, ಸವಾಲುಗಳು ಹಾಗೂ ಟ್ರೆಂಡ್‌ನ ಬಗ್ಗೆ